ಸಾಕ್ಷಿದಾರರಿಗೆ ದಿನಾಂಕಃ 18.03.2017 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

**ಪಾಟೀಸವಾಲು 7ನೇ ಪ್ರತಿವಾದಿಪರ ವಕೀಲರಿಂದಃ-**

ದಾವಾ ಆಸ್ತಿಯನ್ನು ನಾನು ನೋಡಿಲ್ಲ. ದಾವಾ ಆಸ್ತಿ ಬೈರಿದೇವರಕೊಪ್ಪದಲ್ಲಿ ಇದೆ ಎಂದು ಕೇಳಿದ್ದೇನೆ. ಅದನ್ನು ಬಿಟ್ಟು ಬೇರೆ ಗೊತ್ತಿಲ್ಲ. ದಾವಾ ಆಸ್ತಿಯ ಉತಾರವನ್ನು ನಾನು ನೋಡಿಲ್ಲ. ದಾವಾ ಆಸ್ತಿಯ ವ್ಯವಹಾರದ ಬಗ್ಗೆ ಮಾತುಕತೆಯಾದ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. ದಿನಾಂಕಃ 4.05.2010ರಂದು ಈ ಬಗ್ಗೆ ಮಾತುಕತೆ ಆಗಿ ಅದೇ ದಿವಸ ಕರಾರು ಪತ್ರವಾಯಿತು ಎಂದು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿದೆ. ಅಂದು ಆದಂತಹ ಕರಾರುಪತ್ರ ಹಣದ ಭದ್ರತೆಗಾಗಿ ಆದಂತಹ ಕರಾರು ಪತ್ರ ಎನ್ನುವುದು ಸುಳ್ಳು. ಕರಾರು ಪತ್ರವಾದ ದಿನಾಂಕ ನೆನಪಿಲ್ಲ. ಲಕ್ಷಾಂತರ ರೂಪಾಯಿ ವ್ಯವಹಾರಕ್ಕೆ ಸಂಬಂಧಿಸಿದ ಮಾತುಕತೆ ಮತ್ತು ದಾಖಲೆ ಒಂದೇ ದಿವಸ ಆಗಲು ಸಾಧ್ಯವಿಲ್ಲ ಎನ್ನಲಾಗಿ ಅದು ನಿಜ ಈ ಕೇಸಿನ ವ್ಯವಹಾರ ಮತ್ತು ದಾಖಲೆ ಒಂದೇ ದಿವಸ ಆಗಿಲ್ಲ ಎನ್ನುವರು. ಈ ವ್ಯವಹಾರ 10 ಲಕ್ಷ ರೂಪಾಯಿಗಳಿಗೆ ಆಯಿತು. ವಾದಿಯ ಪತಿ ಮತ್ತು ನಾನು ಕಾಸಾ ದೋಸ್ತಿಗಳು ಎನ್ನುವುದು ಸುಳ್ಳು ಆದರೆ ಪರಿಚಯಸ್ಥರು. ನೀವು ಅವರು ಆತ್ಮೀಯ ಸ್ನೇಹಿತರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ಕರಾರು ಪತ್ರವನ್ನು ಯಾರ್‍ಯಾರು ಬರೆದುಕೊಟ್ಟಿದ್ದಾರೆ ಎನ್ನಲಾಗಿ 1ನೇ ಪ್ರತಿವಾದಿ ಬರೆದುಕೊಟ್ಟಿದ್ದಾರೆ ಎನ್ನುವುದು ಗೊತ್ತು ಉಳಿದವರ ಹೆಸರು ಗೊತ್ತಿಲ್ಲ ಎನ್ನುವರು. 1ನೇ ಪ್ರತಿವಾದಿಗೆ ಹಣದ ಅಡಚಣೆ ಇದೆ ಎಂದು 1 ಮತ್ತು 7ನೇ ಪ್ರತಿವಾದಿಯರು ನನಗೆ ಹೇಳಿದರು ಎನ್ನುವುದು ನಾನು ವಾದಿಯ ಪತಿಯನ್ನು ಅವರಿಗೆ ಪರಿಚಯಿಸಿಕೊಟ್ಟೆ ಎನ್ನುವುದು ಆಗ ಅವರು ಹಣ ಕೊಟ್ಟಿದ್ದರಿಂದ ಹಣದ ಭದ್ರತೆಗಾಗಿ ಈ ದಾಖಲೆಯನ್ನು ತಯಾರಿಸಿದ್ದಾರೆ ಎನ್ನುವುದು ಸುಳ್ಳು. ಆ ಹಣವನ್ನು ವಾಪಸ್ಸ ಕೊಡುತ್ತೇವೆ ಎಂದು ನನಗೆ ಮತ್ತು ವಾದಿಗೆ ಹೇಳಿದ್ದಾರೆ ಆದರೆ ಅದನ್ನು ಸ್ವೀಕರಿಸಲು ವಾದಿ ನಿರಾಕರಿಸಿ ಈ ದಾವೆಯನ್ನು ಹೂಡಿದ್ದಾರೆ ಎನ್ನುವುದು

ಅವರಿಗೆ ಸಹಾಯ ಮಾಡಲು ನಾನು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ನನ್ನ ಮನಸ್ಸಾಕ್ಷಿ ವಿರುದ್ಧವಾಗಿ ನಾನು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎನ್ನುವುದು ಸುಳ್ಳು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

2ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.